ಗದಗ್ ಕ್ಷೇತ್ರದ ಹುಲಕೋಟಿ ಗ್ರಾಮದಲ್ಲಿ ಮಹಿಳೆಯರಿಗೆ ಮಹಾವಿದ್ಯಾಲಯ ಸ್ಥಾಪನೆ

98 (270) : ಶ್ರೀ ಪಾಟೀಲ್ ಡಿ.ಆರ್. (ಗದಗ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಮತ ಕ್ಷೇತ್ರದ ಹುಲಕೋಟಿ ಗ್ರಾಮದಲ್ಲಿ ಮಹಿಳೆಯರಿಗಾಗಿ ಮಹಾವಿದ್ಯಾಲಯ ಸ್ಥಾಪಿಸಬೇಕೆಂಬ ಪ್ರಸ್ತಾಪ ಈಗ ಯಾವ ಹಂತದಲ್ಲಿದೆ.

ಆ) ಗ್ರಾಮೀಣ ಪ್ರದೇಶದ ಮಹಿಳೆಯರ ಹೆಚ್ಚಿನ ಶಿಕ್ಷಣಕ್ಕೆ ಅನುಕೂಲವಾಗುವ ಈ ಮಹಾವಿದ್ಯಾಲಯವನ್ನು ಇದೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಸದ್ಯಕ್ಕೆ ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪದವಿ ಪೂರ್ವ ಮತ್ತು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಭೋದಕ ಸಿಬ್ಬಂದಿ ಕೊರತೆ

99 (39) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪದವಿಪೂರ್ವ ಕಾಲೇಜು ಮತ್ತು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿ ವರ್ಗದ ಕೊರತೆ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ತಕ್ಷಣವೇ ತುಂಬಲು ಕ್ರಮ ಜರುಗಿಸುವರೆ;

ಇ) ಕೊಠಡಿ ಹಾಗೂ ಪೀಠೋಪಕರಣಗಳ ಕೊರತೆಯನ್ನು ತ್ವರಿತಗತಿಯಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಹೌದು.

ಆ) ಖಾಲಿ ಇರುವ ಬೋಧಕ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪದವಿಪೂರ್ವ ಕಾಲೇಜುಗಳ ಕೊಠಡಿ ಮತ್ತು ಪೀಠೋಪಕರಣಗಳ ಕೊರತೆ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು.

ಪ್ರಥಮ ದರ್ಜೆ ಕಾಲೇಜು ಬೆಳ್ತಂಗಡಿ ಇದರ ಕಟ್ಟಡವನ್ನು 1987 ರಲ್ಲಿ ಕಟ್ಟಿಸಲಾಗಿದೆ. ರೂ. 9.90 ಲಕ್ಷಗಳ ವೆಚ್ಚದಲ್ಲಿ ಮತ್ತೊಂದು ಕಟ್ಟಡವನ್ನು ನಿರ್ಮಿಸಿದ್ದು, ಇದನ್ನು 14.7.2004 ರಂದು ಇಲಾಖೆಗೆ ಹಸ್ತಾಂತರಿಸಲಾಗಿದೆ. ಸಂಸತ್ ಸದಸ್ಯರಾದ ಶ್ರೀ ವೆಂಕಯ್ಯನಾಯ್ಡು ಇವರ ಸಂಸತ್‌ಸದಸ್ಯರ ನಿಧಿಯಿಂದ ರೂ. 2.50 ಲಕ್ಷಗಳ ನೆರವಿನಿಂದ ಬೋಧನಾ ಕೊಠಡಿ ನಿರ್ಮಾಣವಾಗಿದೆ. ಸದರಿ ಕಾಲೇಜಿನಲ್ಲಿ 267 ವಿದ್ಯಾರ್ಥಿಗಳನ್ನು, ಸದರಿ ಕಟ್ಟಡವು ಸಾಕಾಗುತ್ತದೆ. ಪೀಠೋಪಕರಣಗಳ ಅಗತ್ಯತೆ ಬಗ್ಗೆ ಪ್ರಾಂಶುಪಾಲರಿಂದ ವರದಿ ಪಡೆದು ಈ ಸಾಲಿಗೆ ಒದಗಿಸಿರುವ ಆಯವ್ಯಯದ ಲಭ್ಯತೆಯನುಸಾರ ಕೊರತೆ ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು.